International Journal of Kannada Research 2022; 8(3): 05-07




International Journal of Kannada Research
www.kannadajournal.com

**ISSN: 2454–5813**
IJKR 2022; 8(3): 05-07
© 2022 IJKR
www.kannadajournal.com
Received: 10-05-2022
Accepted: 12-06-2022

**ಕನ್ಯಾಕುಮಾರಿ.ಎಸ್**
ಸಹಾಯಕ ಪ್ರಾಧ್ಯಾಪಕರು. ಮಾನವೀಯ ವಿಜ್ಞಾನ ವಿಭಾಗ.
ಎಂ,ಎಸ್.ರಾಮಯ್ಯ ತಾಂತ್ರಿಕ ಮಹಾವಿದ್ಯಾಲಯ. ಬೆಂಗಳೂರು,
ಬೆಂಗಳೂರು, ಕರ್ನಾಟಕ, ಭಾರತ

**Corresponding Author:**
**ಕನ್ಯಾಕುಮಾರಿ.ಎಸ್**
ಸಹಾಯಕ ಪ್ರಾಧ್ಯಾಪಕರು. ಮಾನವೀಯ ವಿಜ್ಞಾನ ವಿಭಾಗ.
ಎಂ,ಎಸ್.ರಾಮಯ್ಯ ತಾಂತ್ರಿಕ ಮಹಾವಿದ್ಯಾಲಯ. ಬೆಂಗಳೂರು,
ಬೆಂಗಳೂರು, ಕರ್ನಾಟಕ, ಭಾರತ

# ಬಸವಣ್ಣನವರ ವಚನಗಳಲ್ಲಿ ಮಾನವ ಹಕ್ಕುಗಳು

**ಕನ್ಯಾಕುಮಾರಿ.ಎಸ್**

**ಪ್ರಬಂಧದ ಸಾರಲೇಖ**

ಇತ್ತೀಚಿನ ದಿನಗಳಲ್ಲಿ ಮಾನವ ಹಕ್ಕುಗಳ ಸಂರಕ್ಷಣೆ ಬಗ್ಗೆ ಕಾಳಜಿ ಮತ್ತು ಅರಿವು ಹೆಚ್ಚಾಗುತ್ತಿದ್ದು, ಇವು ನಾಗರೀಕತೆ, ಸಮಾಜ ಮತ್ತು ಋಣಾತ್ಮಕ ನ್ಯಾಯ /ಸಾಮಾಜಿಕ ನ್ಯಾಯಗಳ ಮೌಲ್ಯಮಾಪನಗಳಾಗಿವೆ.

ಮಾನವೀಯತೆ ಮತ್ತು ಮಾನವೀಯತೆಯ ಬೆಳವಣಿಗೆಯ ಇತಿಹಾಸದುದ್ದಕ್ಕು ವಿಭಿನ್ನ ರೂಪದ ಸಮಾಜಗಳು -ಉಪಸಮಾಜಗಳು ಹಾಗು ಸಾಮಾಜಿಕ -ಆರ್ಥಿಕ- ಶೈಕ್ಷಣಿಕ ಜೀವನದಲ್ಲಿ ಅಸಮಾನತೆಗಳು ವ್ಯಾಪಕವಾಗಿರುವುದಕ್ಕೆ ವಿಶ್ವ ಸಾಕ್ಷಿಯಾಗಿದೆ. ಹಾಗು ಈ ಬೆಳವಣಿಗೆ ಮಾನವಹಕ್ಕುಗಳ ಉಲ್ಲಂಘನೆಗೂ ಕಾರಣವಾಗಿದೆ.

ಆದರೆ ಬಸವಣ್ಣನವರ ಕಾಲದಲ್ಲಿ ಮಾನವೀಯತೆಗೆ ಪ್ರಾಧನ್ಯತೆ ನೀಡಲಾಯಿತು. ಮಾನವಹಕ್ಕುಗಳುಪ್ರಾಯೋಗಿಕವಾಗಿ ಕಾರ್ಯರೂಪದಲ್ಲಿದ್ದವು ಎಂಬುದು ಅತ್ಯಂತ ಗಮನೀಯವಾದ ಅಂಶ. ಹನ್ನೆರಡನೆಯ ಶತಮಾನದಲ್ಲಿಯೆ ವಿಶ್ವಮಾನವ ಬಸವಣ್ಣ ಸಾರ್ವತ್ರಿಕವಾಗಿ ಎಲ್ಲರಿಗೂ ಮಾನವ ಹಕ್ಕುಗಳು ಅನ್ವಯವಾಗಬೇಕೆಂದು ಘೋಷಿಸಿ, ಸಾರ್ವತ್ರಿಕ ಭಾತೃತ್ವವನ್ನುಪ್ರತಿಪಾದಿಸಿದರು ಹಾಗು ಸಮಾನತೆಯ ತತ್ವವನ್ನು ಕಾರ್ಯರೂಪಕ್ಕೆ ತಂದರು.

ಬಸವಣ್ಣ ನವರ ವಚನಗಳಲ್ಲಿ ಬರುವ ಮಾನವ ಹಕ್ಕುಗಳು ಮತ್ತು ಸಮಾಜಕ್ಕೆ ಸಂಭಂದಿಸಿದ ಆಯ್ದ ಕೆಲವು ವಿಚಾರಗಳನ್ನು ಈ ಪ್ರಬಂಧದ ಮೂಲಕ ವಿಶ್ಲೇಷಿಸಲಾಗಿದೆ.

**ಶಿರ್ಷಿಕೆ:** ಬಸವಣ್ಣನವರ ವಚನಗಳಲ್ಲಿ, ಮಾನವ ಹಕ್ಕುಗಳು

## ಮುನ್ನುಡಿ

ಕರ್ನಾಟಕದಲ್ಲಿ ನಡೆದ ಹನ್ನೆರಡನೇ ಶತಮಾನದ ಶರಣ ಚಳವಳಿ ಸಮಾನತೆ ಮತ್ತು ಮಾನವತೆಯನ್ನು ಸಾರಿದ ಒಂದು ಐತಿಹಾಸಿಕ ಘಟನೆ. ಆ ಚಳವಳಿಯ ಭಾಗವಾಗಿ ರೂಪುಗೊಂಡ ವಚನ ಸಾಹಿತ್ಯ ಇಂದಿಗೂ ಅತ್ಯಂತ -ಪ್ರಸ್ತುತ. ಸಾಮಾಜಿಕ ಅಸಮಾನತೆ ಸರಪ್ರದಾಯಕ್ಕೆ ಪ್ರತಿಕ್ರಿಯೆಯಾಗಿ ಬಂದ ವಚನ ಸಾಹಿತ್ಯ ಉಂಟು ಮಾಡಿದ ಅರಿವು ಸಾರ್ವ ಕಾಲಿಕವಾದದ್ದು ಶರಣರ ಚಳವಳಿಗೆ ಪ್ರೇರಕ ಶಕ್ತಿಯಾಗಿ ನಿಂತ ಮಹಾಮಾನವತಾವಾದಿ ಬಸವಣ್ಣನವರ ನೇತೃತ್ವದಲ್ಲಿ, ವಿವಿಧ ವೃತ್ತಿಗಳಿಗೆ ಸೇರಿದ ನೂರಾರು ಕಾಯಕ ಜೀವಿಗಳು ತಮ್ಮ ತಮ್ಮ -ಅನುಭವ ಜ್ಞಾನವನ್ನು ಸಾಮೂಹಿಕವಾಗಿ ಬಿತ್ತರಿಸಿದರ ಅಪೂರ್ವ ಸಂದರ್ಭ ಆದಾಗಿತ್ತು. ಸಾಮಾಜಿಕವಾದ -ಕ್ರಾಂತಿಗು ನಾಂದಿ ಹಾಡಿದ ಆ ಚಳುವಳಿಯ ಉತ್ಪನ್ನವು ಈ ವಚನಗಳನ್ನ ಸೃಷ್ಟಿಸಿತು. ಅಂಧಕಾಂದಲ್ಲಿದ್ದ ಸಮಾಜಕ್ಕೆ ಅರಿವಿನ ಬೆಳಗನ್ನು ತೋರಿತು.

ವಚನ ಸಾಹಿತ್ಯದ ಮೂಲಕ ನಡೆಸಿರುವ ಸಾಮಾಜಿಕ ಕ್ರಾಂತಿ- ಸಂಘಟನೆಗಳು ಹಾಗು ಮೂಡಿಸಿದ ವೈಚಾರಿಕ ಪ್ರಜ್ಞೆ ಜನ ಜಾಗೃತಿಗಳನ್ನು ಮೂಡಿಸುವ, ಮತ್ತು ಸಮಾಜವನ್ನು ಎಚ್ಚರಿಸುವ, ವಿಮರ್ಶಿಸುವ, ಬದಲಾವಣೆಗಳನ್ನು ತಂದುಕೊಟ್ಟವು. "೧೨ನೆಯ ಶತಮಾನವಂತೂ ಭರತಖಂಡದ ಸಾಹಿತ್ಯ ಇತಿಹಾಸದಲ್ಲಿಯೇ ಒಂದು ಅದ್ವಿತೀಯವಾದ ಯುಗ, ಆ ಕಾಲದಲ್ಲಿ ಕಂಡರಿಯದಂಥ ಸಾಮಾಜಿಕ ಸಮತೆಯನ್ನು ಬೋಧಿಸಿದುದಲ್ಲದೆ ಸಾಧಿಸಿಯೂ ತೋರಿಸಿದ್ದು ವಚನ ಸಾಹಿತ್ಯದ ವೈಶಿಷ್ಟತೆ, ಇಂತಹ ಅವಕಾಶ ಕರ್ನಾಟಕಕ್ಕೆ ತಂದುಕೊಟ್ಟವರು ಬಸವಾದಿ ಶಿವಶರಣರು".

ಬಸವಣ್ಣನವರ ಕಾಲದಲ್ಲಿ ಮಾನವೀಯತೆಗೆ ಪ್ರಾಧನ್ಯತೆ ನೀಡಲಾಯಿತು. ಮಾನವಹಕ್ಕುಗಳುಪ್ರಾಯೋಗಿಕವಾಗಿ ಕಾರ್ಯರೂಪದಲ್ಲಿದ್ದವು ಎಂಬುದು ಅತ್ಯಂತ ಗಮನೀಯವಾದ ಅಂಶ. ವಿಶ್ವಮಾನವ ಬಸವಣ್ಣ ಸಾರ್ವತ್ರಿಕವಾಗಿ ಎಲ್ಲರಿಗೂ ಮಾನವ ಹಕ್ಕುಗಳು ಅನ್ವಯವಾಗಬೇಕೆಂದು ಘೋಷಿಸಿ, ಸಾರ್ವತ್ರಿಕ ಭಾತೃತ್ವವನ್ನುಪ್ರತಿಪಾದಿಸಿದರು ಹಾಗು ಸಮಾನತೆಯ ತತ್ವವನ್ನು ಕಾರ್ಯರೂಪಕ್ಕೆ ತಂದರು.

ಸಮಾನತೆಯ ಮುಕ್ತ ಚರ್ಚೆಗಳು- ಸಮಾಜದಲ್ಲಿದ್ದ ವಿಷಮತೆಗಳ ವಿರುದ್ಧ ಸಾಮಾಜಿಕ ಮೌಲ್ಯಗಳನ್ನು ನಿರೂಪಿಸುವ ಸಮಕಾಲೀನ ಚಿಂತನೆಗಳು ರೂಪಗೊಂಡ ಆಕಾಲ, ಅನುಭವಗಳನ್ನು ವಿನಿಮಯಮಾಡಿಕೊಳ್ಳಲು ಅವಕಾಶ ನೀಡಿದ ಆ ಸಂದರ್ಭ ಅವಿಸ್ಮರಣೀಯವಾದದ್ದು.ವಿಶ್ವ ಮಾನವ ಹಕ್ಕುಗಳು ಮತ್ತು ಸಮಾನತೆಯ ಜಾಗೃತಿಯನ್ನು ಬಸವಣ್ಣ ನವರು

ಹನ್ನೆರೆಡನೆಯ ಶತಮಾನದಲ್ಲಿಯೇ ಧೃಢಿಕರಿಸಿ ಹೇಳಿದ್ದಾರೆ.

**ವಚನಗಳಲ್ಲಿ ಸಂವಿಧಾನದ ಲಕ್ಷಣಗಳು**

ಸಾಮಾಜಿಕ ಸ್ಪಂದನೆ ಮತ್ತು ವ್ಯಕ್ತಿ ವಿಕಾಸನದ ವೇದಿಕೆಯಾಗಿದ್ದ ಅನುಭವ ಮಂಟಪವು ನಮ್ಮ ಇಂದಿನ ಸಂವಿಧಾನದ ಮುಖ್ಯ ಲಕ್ಷಣಗಳನ್ನು ಪ್ರತಿಬಿಂಬಿಸುತ್ತಿತ್ತು. ಸಮಾನತೆ, ಸ್ವಾತಂತ್ರ್ಯ, ಸಹಬಾಳ್ವೆ, ಭಾವೈಕ್ಯತೆಯನ್ನು ಪ್ರತಿಪಾದಿಸುವ ಗುರಿಯನ್ನು ಹೊಂದಿದ್ದು, ಜಾತಿ- ಭೇದಗಳ ತಾರತಮ್ಯವಿಲ್ಲದೆ, ಲಿಂಗ-ಭೇದಗಳ ಅಸಮಾನತೆ ಇಲ್ಲದೆ, ವರ್ಗ-ವರ್ಣಗಳ ಸಂಘರ್ಷವಿಲ್ಲದೆ ಸರ್ವರು ಅನುಭವಮಂಟಪದಲ್ಲಿ ಮುಕ್ತವಾಗಿ ಚರ್ಚಿಸ ಬಹುದಾಗಿತ್ತು, ತಮ್ಮ ಅಭಿಪ್ರಾಯಗಳನ್ನು ವಿಚಾರಗೋಷ್ಠಿಗಳಲ್ಲಿ ಮಂಡಿಸಬಹುದಾಗಿತ್ತು, ಅನುಭವ ಮಂಟಪದಲ್ಲಿ ನಡೆಯುತ್ತಿದ್ದ ಈ ವಿಚಾರ ಗೋಷ್ಟಿಗಳು ಆಧುನಿಕ ಪ್ರಜಾಪ್ರಭುತ್ವದ ಮಾದರಿಯ ಪ್ರಜಾಪ್ರಭುತ್ವದ ವೇದಿಕೆಯಾಗಿ ಬಸವಾದಿ ಶರಣರ ಕಾಲದಲ್ಲಿಯೇ ಕಾರ್ಯನಿರ್ವಹಿಸುತ್ತಿದ್ದವೆಂಬುದನ್ನು ಈಅಂಶಗಳು ನಿರೂಪಿಸುತ್ತವೆ.

ಮಾನವ ಹಕ್ಕುಗಳು: ನೈಸರ್ಗಿಕದತ್ತವಾಗಿ ಮಾನವನಿಗೆ ಲಭಿಸಿರುವ ಹಾಗು ಮಾನವನ ಸರ್ವತೋಮುಖ ಅಭಿವೃದ್ಧಿಗೆ ಅಗತ್ಯವಾಗಿರುವ ಹಕ್ಕುಗಳು ಮಾನವ ಹಕ್ಕುಗಳಾಗಿವೆ. ಇಪ್ಪತ್ತನೆ ಶತಮಾನದಲ್ಲಿ ಅವಘಡಿಸಿದ ಯುದ್ಧಗಳು ಮತ್ತು ಮಾನವ ಹಕ್ಕುಗಳ ಉಲ್ಲಂಘನೆ ಪರಿಣಾಮವಾಗಿ 1948 ರಲ್ಲಿ ವಿಶ್ವಸಂಸ್ಥೆಯು ಸ್ವತಂತ್ರ, ಸಮಾನತೆ, ಶಿಕ್ಷಣ, ಆರೋಗ್ಯ ಇವೇ ಮೊದಲಾದವುಗಳು ಮೂಲಭೂತವಾದ ಸಾರ್ವತ್ರಿಕ ಮಾನವ ಹಕ್ಕುಗಳೆಂದು ಘೋಷಿಸಿದೆ, ಇದರ ಉದ್ದೇಶ ಮಾನವನ ಸಾಮಾಜಿಕ, ನಾಗರೀಕ, ಆರ್ಧಿಕ ಸಾಂಸ್ಕೃತಿಕ ಹಕ್ಕುಗಳಿಗೆ ಚ್ಯೂತಿಬಾರದಂತೆ ಗೌರವಿಸುವುದಾಗಿದೆ.

**ವಚನಗಳು**

ಹನ್ನೆರಡನೇ ಶತಮಾನದ ಶರಣರು ಸೃಷ್ಟಿಸಿದ ಸಾಹಿತ್ಯವು ಅತ್ಯಂತ ಸರಳ ಹಾಗು ಸಜ್ಜನಿಕೆ ಯಿಂದ ಕೂಡಿದ್ದ ವಚನಗಳ ರೂಪದ್ದಾಗಿತ್ತು. ಜನಸಾಮಾನ್ಯನು ಸಹ ತನ್ನ ಅನಿಸಿಕೆ,ಆಲೋಚನೆ ಅನುಭವಗಳು ಹಾಗು ಭಾವನೆಗಳನ್ನು ಈ ವಚನಗಳ ಮೂಲಕ ಅಭಿವ್ಯಕ್ತಿಸಬಹುದಾಗಿತ್ತು. ವ್ಯಕ್ತಿ ಮತ್ತು ಸಾಮಾಜಿಕ ಜೀವನ ದಿಂದ ಆಧ್ಯಾತ್ಮಿಕ ಮೌಲ್ಯಗಳವರೆಗಿನ ಉದಾತ್ತ ಚಿಂತನೆಗಳನ್ನೊಳಗೊಂಡಿದ್ದು ವಚನ ಸಾಹಿತ್ಯದ ವೈಶಿಷ್ಟ್ಯವಾಗಿತ್ತು.

ಅಂದಿನ ಸಮಾಜದಲ್ಲಿ ನವಜಾಗೃತಿಯನ್ನುಂಟು ಮಾಡಿ, ಜನಸಾಮಾನ್ಯರ ಮನ ಮುಟ್ಟುವಂತೆ ಸಾಹಿತ್ಯ ರಚನೆ ಮಾಡಿದ್ದಲ್ಲದೆ, ವಚನಗಳ ಮೂಲಕ ಸಾಮಾಜಿಕ ಅನ್ಯಾಯ-ಅಸಮಾನತೆಗಳನ್ನು ಖಂಡಿಸಲಾಯಿತು.

12ನೇ ಶತಮಾನ ಕರ್ನಾಟಕ ಕಂಡ ಅದ್ವಿತೀಯ ಯುಗ. ಭಾರತದ ಸಂಸ್ಕೃತಿ ಚರಿತ್ರೆಯಲ್ಲಿಯೇ ಅಪೂರ್ವವಾದುದು.[1] ಸರಳ ದೇಶಿ-ಭಾಷೆಯಲ್ಲಿ ವಚನಗಳು ರಚನೆಯಾದವು ಮತ್ತು ಅಭಿವ್ಯಕ್ತಿಸಲ್ಪಟ್ಟವು. ಸಾಮಾಜಿಕ ಅನ್ಯಾಯಕ್ಕೆ ಸಾಮೂಹಿಕ ಪ್ರತಿಭಟನೆ ಸೃಷ್ಟಿಸುವಷ್ಟು, ಶಕ್ತಿಯುತವಾಗಿ ವಚನಗಳು ಪ್ರಭಾವ ಬೀರಿದವು.

ಸಾಹಿತ್ಯ ಸಮಾಜದ ಮೇಲೆ ನೇರವಾಗಿ ಪ್ರಭಾವ ಬೀರುತ್ತದೆ.[2] ಸಮಾಜದ ಅವಶ್ಯಕತೆಗಳಿಗೆ ಸ್ಪಂದಿಸಿದ ವಚನಸಾಹಿತ್ಯ ಹುಟ್ಟಿ ಹಾಕಿದ ವೈಚಾರಿಕ ನಿಲುವುಗಳು ಹಾಗು ಸಾಮಾಜಿಕ ಜಾಗೃತಿ ಪ್ರಸ್ತುತಸಮಾಜಕ್ಕೆ ಮಾದರಿಯಾಗಿದೆ.

**ವಚನಗಳಲ್ಲಿ ಮಾನವ ಹಕ್ಕುಗಳು ಮತ್ತು ಸಾಮಾಜಿಕ ನ್ಯಾಯ**

ವಿಶ್ವ ಸಂಸ್ಥೆ ಘೋಷಿಸಿರುವ ವಿಶ್ವ ಮಾನವ ಹಕ್ಕುಗಳನ್ನು ಸಮ್ಮತಿಸುವ ವ್ಯಕ್ತಿ ಸ್ವತಂತ್ರ, ಸ್ತ್ರೀ ಸಮಾನತೆ, ಸಾಮಾಜಿಕ ನ್ಯಾಯ, ಆರ್ಧಿಕ ಸಮಾನತೆಗೆ ಮಾನ್ಯತೆ ನೀಡಿರುವುದು ಹನ್ನೆರೆಡನೆಯ ಶತಮಾನದಲ್ಲಿಯೇ ಬಸವಣ್ಣನವರ ವಚನಗಳಲ್ಲಿ ಪ್ರತಿಬಿಂಬಿಸಿವೆ. ಆ ಕಾಲದಲ್ಲಿಯೇ ಜನ ಸಾಮಾನ್ಯರಿಗೆ ಮೂಲಭೂತ ಹಕ್ಕುಗಳ ಕುರಿತು ಜಾಗೃತಿ ಮೂಡಿಸಲಾಗಿತ್ತು ಎಂಬುದರಲ್ಲಿ ಸಂಶಯವಿಲ್ಲ.

ವಚನಗಳಲ್ಲಿ ಮಾನವ ಹಕ್ಕುಗಳ ಮೂಲಭೂತವಾಗಿ ಆಜ್ಞೆಯ ಸ್ವರೂಪದಲ್ಲಿ, ಮನವಿ- ಘೋಷಣೆ- ತಡೆಯಾಜ್ಞೆ ರೂಪದಲ್ಲಿ ವಿವರಣೆ-ವಿಮರ್ಶೆಗಳಾಗಿ ಕಾರ್ಯಾಚರಣೆಯಲ್ಲಿವೆ, ಸಾವಿರ-ಲಕ್ಷಗಳ ಸಂಖ್ಯೆಯಲ್ಲಿ ಬಸವಣ್ಣನ ಅನುಯಾಯಿಗಳು ಇದನ್ನು ಸಾಕ್ಷಿಕರಿಸಿದ್ದಾರೆ.[3]

ಸಮಾಜದಲ್ಲಿದ್ದ ಜಾತಿ-ಕುಲ, ಮತ-ಧರ್ಮಗಳ ಗೊಂದಲಗಳನ್ನು ದೂರೀಕರಿಸುವ ಬಸವಣ್ಣನವರ ಆಲೋಚನೆ-ಆದರ್ಶಗಳು ವಚನಗಳರೂಪದಲ್ಲಿ ಪ್ರಭಾವ ಬೀರಿದವಲ್ಲದೆ, ಸಮಾನ ಆದರ್ಶಗಳನ್ನೊಳಗೊಂಡ ಒಂದು ಶರಣರ ಸಮೂಹ ಕಾರ್ಯ ಪ್ರವರ್ತವಾಗಿ ಐತಿಹಾಸಿಕ ದಾಖಲೆಯನ್ನು ಸೃಷ್ಟಿಸಿತು. ಸಮಾಜದ ಎಲ್ಲಾ ಜಾತಿಗಳ ಮುಖ್ಯವಾಗಿ ಸಮಾಜದ ಕೆಳಸ್ಥರದವರನ್ನು ಹೊಂದಿದ್ದ ಆ ಶರಣರ ಸಮಾಜ ಇಂದಿನ ಪ್ರಜಾಪ್ರಭುತ್ವ ಮೂಲ ಮಾದರಿಯ ಜಾತ್ಯಾತೀತ-ಸಮಾಜವನ್ನು ಹೋಲುತ್ತಿತ್ತು.

ಬಸವಣ್ಣ ಜಾತಿ-ಕುಲಗಳನ್ನು ಖಂಡಿಸಿ, ಜನನ ಆಕಸ್ಮಿಕ; ಕೇವಲ ಹುಟ್ಟಿನ ಆಧಾರದ ಮೇಲೆ ಜಾತಿ-ಕುಲಗಳಿಗೆ ಪ್ರಾಮುಖ್ಯತೆನೀಡುವುದನ್ನುಸರಿಯಲ್ಲವೆಂದುವಾದಿಸಿದರು. ವ್ಯಾಸ

ಭೋವಿತಿಯ ಮಗ, ಮಾರ್ಕಂಡೇಯಮಾತಂಗಿಯಮಗ,

ಕುಲವನರಿಸದಿರಿಂ ಭೋ! ಕುಲದಿಂದ ಮುನ್ನೇನಾದಿರಿಂ ಭೋ!

ಸಾಕ್ಷಾತ್ ಅಗಸ್ತ್ಯ-ಕಬ್ಬಿಲ, ದುರ್ವಾಸ-ಮುಚ್ಚಿಗ, ಕಶ್ಯಪ-ಕಮ್ಮಾರ, ಮೂರು ಭುವನವರಿಯೇನಾವಿದ, ಕಾಣಿ ಭೋ!

ನಮ್ಮ ಕೂಡಲ ಸಂಗನ ವಚನವಿಂತೆಂದುದು: ಇಂತಹ ಋಷಿ-ಮುನಿಗಳು ಕೆಳಸ್ಥರದಿಂದ ಬಂದವರೆ ಆದ್ದರಿಂದ ಜಾತಿ -ಕುಲಗಳಿಗೆ ಹೆಚ್ಚಿನ ಮಹತ್ವ ನೀಡಬಾರದೆಂಬುದನ್ನು ಬಸವಣ್ಣ ಈ ವಚನದ ಮೂಲಕ ನಿರೂಪಿಸದ್ದಾರೆ

ಹನ್ನೆರಡನೆಯ ಶತಮಾನದಲ್ಲಾದ ಈ ಕ್ರಾಂತಿಕಾರಕ ಚಳುವಳಿಯು ಮಾನವೀಯತೆ ಹಾಗು ಮಾನವ ಹಕ್ಕುಗಳ ಮಹತ್ವವನ್ನು ಎತ್ತಿ ಹಿಡಿಯಿತು. ಅಲ್ಲದೆ ವಚನಗಳ ಮಾರ್ಗದಲ್ಲಿ ತಮ್ಮ ಜೀವನ ರೂಪಿಸಿಕೊಂಡ ಶರಣರ ಒಂದು ಉಪಸಮಾಜದ ಸೃಷ್ಟಿಗೆ ನಾಂದಿಯಿತು. ಈ ಶರಣ ಸಮಾಜಕ್ಕೆ ವಚನಗಳೇ ಮಾರ್ಗದರ್ಶನಗಳಾಗಿದ್ದವು, ಅಂದಿನ ಸಮಾಜದಲ್ಲಿ ಜಾರಿಯಲ್ಲಿದ್ದ ವರ್ಣಾಶ್ರಮಗಳೇ ಮೊದಲಾದ ಕಾನೂನುಗಳನ್ನು ಧಿಕ್ಕರಿಸಿ ಮಾನವೀಯ ಮೌಲ್ಯಗಳಿಗೆ ಒತ್ತು ನೀಡಿದರು, ಆಚರಣೆಯಲ್ಲಿದ್ದ ಸಂಪ್ರದಾಯಗಳನ್ನು ವಿರೋಧಿಸಿದ ಈ ಉಪಸಮಾಜ ಸಾಮಾಜಿಕನ್ಯಾಯದ ಧ್ವನಿ ಮೊಳಗಿಸಿತು. ಈ ಕ್ರಾಂತಿಸ್ವರೂಪದ ಬದಲಾವಣೆಯ ಪ್ರತಿರೂಪವಾಗಿ ಸಾಮಾಜಿಕ ಅನ್ಯಾಯದ ವಿರುಧ್ಧ ದಂಗೆ ಸಾರಿ, ನೈಸರ್ಗಿಕ ನ್ಯಾಯ, ಸಮಾನತೆಯ ಬೇಡಿಕೆಯನ್ನು ಮುಂದಿಡಲಾಯಿತು.

ಬಸವಣ್ಣನ ವಚನಗಳಲ್ಲಿ ಅಂದಿನ ಸಮಾಜದಲ್ಲಿದ್ದ ಅಸಮಾನತೆಯ ವಿರುದ್ಧ ಪ್ರತಿಭಟಿಸಿ, ವ್ಯಕ್ತಿ ಸ್ವತಂತ್ರ-ವಾಕ್ ಸ್ವತಂತ್ರಗಳಿಗೆ ಮಹತ್ವ ನೀಡಿದರು. ನೈಸರ್ಗಿಕಸದತ್ತವಾದ ಜನ್ಮಸಿದ್ಧ ಮಾನವ ಹಕ್ಕುಗಳಿಗೆ ಚ್ಯುತಿ ಬರಬಾರದೆಂದು ಮಂಡಿಸಿದರು. ವಾಕ್ ಸ್ವತಂತ್ರ -ಅಭಿವ್ಯಕ್ತಿ ಸ್ವತಂತ್ರಗಳು ಸಾರ್ವತ್ರಿಕ ಹಕ್ಕುಗಳೆಂದು ನಿರೂಪಿಸಿದರು.

ಬಸವಣ್ಣನ ವಚನಗಳಲ್ಲಿ ಮಾನವ ಹಕ್ಕುಗಳಬಗ್ಗೆ ಮುಖ್ಯವಾಗಿ ಪ್ರಸ್ಥಾಪಿಸದ್ದಲ್ಲದೆ ಕ್ರಮಬದ್ಧವಾಗಿ ಸಮಾಜದಲ್ಲಿ ಕಾನೂನಗಳ ರೂಪದಲ್ಲಿ ಕಾರ್ಯರೂಪಕ್ಕೆ ತರಲಾಯಿತು. ವಚನಕಾರರು ನುಡಿ-ನಡೆ ಧ್ಯೇಯವಾಗಿಸಿಕೊಂಡು ತಾವು ನುಡಿದಂತೆ-ನಡೆದು ಜಾರಿಗೊಳಿಸಲಾದ ಕಾನೂನು ನಿಯಮಗಳನ್ನು ಕಟ್ಟುನಿಟ್ಟಾಗಿ, ಪರಿಪಾಲಿಸಿದರು.

ಹನ್ನೆರಡನೆಯ ಶತಮಾನದಲ್ಲಿ ವಚನಗಳಲ್ಲಿ ಪ್ರಸ್ಥಾಪಿಸಿಲಾಗಿದ್ದ ಮಾನವ ಹಕ್ಕುಗಳೆಂದರೆ:

**ಸಮಾನತೆಯ ಹಕ್ಕು:** ಸಾಮಾಜಿ-ಆರ್ಧಿಕ ಸಮಾನತೆಗಳನ್ನು ಸಮಾನವಾಗಿ ಎತ್ತಿಹಿಡಿದ ಬಸವಣ್ಣ ಆರ್ಧಿಕ ಸಮಾನತೆಗಾಗಿ ಕಾಯಕತತ್ವವನ್ನು ಮಂಡಿಸಿ, ದುಡಿಮೆ ಮತ್ತು ಪರಿಶ್ರಮಗಳಂತಹ ಆರ್ಧಿಕ ನೀತಿಯನ್ನುಸಾರಿದರು

ಅಂದಿನ ಸಮಾಜದಲ್ಲಿ ಕೆಲವೇ ಜನಾಂಗಕ್ಕೆ ಲಭ್ಯವಿದ್ದ ಉನ್ನತ ದರ್ಜೆ ಹಾಗು ಉಳಿದವರನ್ನು ಕೆಳದರ್ಜೆಎಂದು ಪರಿಗಣಿಸಲಾಗುತ್ತಿದ್ದ

---

[1] 1. ಹೆಚ್.ತಿಪ್ಪೇರುದ್ರಸ್ವಾಮಿ: ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪುಟ-337

[2] ಬಿ.ವಿ.ವೈಕುಂಟರಾಜ್: ಸಂಪಾದಕರ ಡೈರಿ, ಪುಟ. 122.

[3] ಹಿರೇಮಠ ಸಿ.ಎನ್: ಬಸವ ಮತ್ತು ಮಾನವೀಯತೆ, ಬಸವಜರ್ನಲ್.ಸಂಪುಟ-1,ಪುಟ-13

ಸಂಪ್ರದಾಯಗಳವಿರುದ್ಧ ಸಮಾನತೆ ಅವಕಾಶ ಸಾರ್ವತ್ರಿಕವಾಗುವಂತೆ ಪ್ರತಿಪಾದಿಸಿದರು.

**ಶೈಕ್ಷಣಿಕ ಹಕ್ಕು**

ಕೇವಲ ಉನ್ನತ ಕುಲದವರಿಗೆ ಲಭ್ಯವಾಗಿದ್ದತು, ಸಾಂಪ್ರದಾಯಿಕ ಕಾರಣಗಳಿಂದ ಮಹಿಳೆಯರ ಶಿಕ್ಷಣಕ್ಕೆ ನಿರ್ಭಂದ ಹೇರಲಾಗಿತ್ತು ಇಂಥಹ ವ್ಯವಸ್ಥೆಯ ವಿರುದ್ಧ ಪ್ರತಿರೋಧಿಸಿ ಸಮಾಜದಲ್ಲಿ ಮಹಿಳೆ ಮತ್ತು ಎಲ್ಲಾಕುಲದವರಿಗೂ ಶಿಕ್ಷಣದ ಅವಕಾಶಗಳನ್ನು ಕಲ್ಪಿಸಲಾಯಿತು.

**ಸಾಂಸ್ಕೃತಿಕ ಹಕ್ಕು**

ಲಿಂಗ-ಜಾತಿ ಭೇಧಗಳ ತಾರತಮ್ಯವಿಲ್ಲದೆ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಎಲ್ಲರಿಗು ಸಕ್ರೀಯವಾಗಿ ಪಾಲ್ಗೊಳ್ಳುವ ಅವಕಾಶ ಕಲ್ಪಿಸಲಾಯಿತು.ಅನುಭವ ಮಂಟಪದ ಚಟುವಟಿಕೆಗಳಲ್ಲಿ ಸರ್ವರಿಗು ಮುಕ್ತವಾಗಿ ಭಾಗವಹಿಸುವಂತಹ ಅವಕಾಶ ವಚನಗಳಕಾಲದಲ್ಲಿ ಸೃಷ್ಟಿಯಾಯಿತು.

**ವಾಕ್ ಸ್ವತಂತ್ರ ಮತ್ತು ಅಭಿವ್ಯಕ್ತಿ ಸ್ವತಂತ್ರದ ಹಕ್ಕು:**

ಎಲ್ಲಾ ಜಾತಿ ಮತ್ತು ಕಸುಬುಗಳವರಿಗು ವಚನಗಳನ್ನು ರಚಿಸುವ ಮತ್ತು ಅಭಿವ್ಯಕ್ತ ಪಡಿಸುವ ಅವಕಾಶವನ್ನು ಅನುಭವ ಮಂಟಪದಲ್ಲಿ ಕಲ್ಪಿಸಲಾಗಿತ್ತು.

**ಆತ್ಮಸಾಕ್ಷಿಯ ಹಕ್ಕು**

ಅತ್ಯಂತ ಕೆಳಸ್ಥರದಲ್ಲಿದ್ದ ಜಾತಿ-ಸಮಯದಾಯಗಳವರಿಗೂ ಆತ್ಮಸಾಕ್ಷಿ ಒಪ್ಪುವಂತೆ ದ್ಯಾನ-ಲಿಂಗ ಪೂಜೆಗಳಿಗೆ ಅನುವು ಮಾಡಿಕೊಡಲಾಯಿತು.
ವಚನಗಳು ಅಂತರಂಗದೊಳಗಿನ ಆತ್ಮವನ್ನು ಗೌರಿಸುವ, ತನ್ನೊಳಗಿನ ಚೈತನ್ಯವನ್ನು ಆರಾಧಿಸಿ, ಧೃಡಚಿತ್ತನಾಗಿ ಆತ್ಮಬಲವನ್ನು ವೃದ್ಧಿಸಿಕೊಂಡು ಪರಿಪೂರ್ಣ ಮಾನವನಾಗುವ ಮಾನವತೆಯ ಸಂದೇಶವನ್ನು ಸಾರುತ್ತವೆ ಎಂದೇ ಹೇಳಬಹುದು.

> ಅವನ್ಯಾರವ, ಅವನ್ಯಾರವ ಎನ್ನದಿರಯ್ಯಾ!
> ಇವನಮ್ಮವ, ಇವನಮ್ಮವನೆನ್ನಿರಯ್ಯಾ!

ಎಂದು ಬಸವಣ್ಣನವರು ತಮ್ಮ ವಚನಗಳಲ್ಲಿ ಜಾತ್ಯಾತೀತ ಸಮಾಜದ ತತ್ವವನ್ನು ಹುಟ್ಟು ಹಾಕಿ ಸಹೋದರ ಭಾವನೆಯನ್ನು ಮೂಡಿಸಿದ್ದಾರೆ.
ಜಾತೀಯತೆಯನ್ನು ಧಿಕ್ಕರಿಸಿದ ಬಸವಣ್ಣ -
ಚೆನ್ನಯ್ಯನ ಮನೆಯದಾಸನ ಮಗನು, ಕಕ್ಕಯ್ಯನ ಮನೆಯ ದಾಸಿಯ ಮಗಳು!
ಇವರಿಬ್ಬರಿಗೆ ಹುಟ್ಟಿದ ಮಗ ನಾನು, ಕೂಡಲ ಸಂಗಮ ದೇವನೇಸಾಕ್ಷಿ ಎಂದು ತನ್ನನ್ನು ಉದಾಹರಣೆಯಾಗಿಸಿಕೊಂಡಿದ್ದಾರೆ.[4]

**ವಿಶ್ಲೇಷಣೆ**

ಅತ್ಯಂತ ಗಮನೀಯವಾದ ಅಂಶವೆಂದರೆ ವಚನಗಳು ಮಾನವ ಹಕ್ಕುಗಳನ್ನು ಜನತೆಗೆ ದಯಪಾಲಿಸಿದವೆಂಬುದು;
ಈಮೊದಲೇ ಹೇಳಿದಂತೆ ವಚನಗಳು ಮೂಲತಃ ಘೋಷಣೆಗಳು, ಹಕ್ಕುಗಳು, ಆದೇಶಗಳು, ವಿಮರ್ಶೆಗಳು, ಹಾಗು ಆಜ್ಞೆ ಗಳರೂಪದಲ್ಲಿ ಅನುಶಾಸನಗಳಾದವು.
ಸಾಮಾಜಿಕ ನೆಲೆಯಲ್ಲಿ ಸಾರ್ವತ್ರಿಕ ಮಾನವ ಹಕ್ಕುಗಳು, ಮಾನವೀಯ ಮೌಲ್ಯಗಳು,ನೀತಿ ಸಂಹಿತೆಗಳು, ಶಾಂತಿ ಸಂಯಮ, ಭಾತೃತ್ವ, ಸಹಭಾಗಿತ್ವ, ಸಹಬಾಳ್ವೆ, ವ್ಯಕ್ತಿ ಗೌರವಗಳಂತಹ ಅಮೂಲ್ಯ ಅಂಶಗಳು ವಚನಗಳಲ್ಲಿ ಅಭಿವ್ಯಕ್ತವಾಗಿವೆ. ಮುಖ್ಯವಾಗಿ ಬಸವಣ್ಣನವರ ವಚನಗಳಲ್ಲಿ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿದು ಅಯ್ಯಾ ಎಂಬುವ ಗೌರವ ಸಂಭೋದನೆಯನ್ನು ಬಳಸುತ್ತಾರೆ.

> ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ!
> ಎನಗಿಂತ ಕಿರಿಯರಿಲ್ಲ ಎನ್ನುವ ಭಾವನೆಗಳನ್ನು ವಚನಗಳಲ್ಲಿ ವ್ಯಕ್ತಪಡಿಸುತ್ತಾರೆ.

ಕಂಡ ಭಕ್ತನಿಗೆ ಕೈ ಮುಗಿಯುವಾತನೆ ಭಕ್ತ; ಮೃದು ವಚನವೇಸಕಲ ಜಪಂಗಳಯ್ಯಾ; ಮೃದುವಚನವೇ ತಪಂಗಳಯ್ಯಾ;ಸದ್ವಿನಯವೇ ಸದಾಶಿವನ ಒಲುಮೆಯ್ಯಾ! ಎನ್ನುವ ಸರ್ವರನ್ನು ಗೌರವಿಸುವ, ಮಾನವೀಯತೆಯೇ ಪವಿತ್ರವಾದದ್ದೆಂಬ ಉದಾತ್ತವಾದ ಚಿಂತನೆ ಬಸವಣ್ಣನ ಈ ವಚನದಲ್ಲಿದೆ.

**ಸಮಾರೋಪ**

ಕಳಬೇಡ,ಕೊಲಬೇಡ; ಹುಸಿಯ ನುಡಿಯಲು ಬೇಡ,ಅನ್ಯರಿಗೆ ಅಸಹ್ಯಪಡಬೇಡ; ಇದೆ ಅಂತರಂಗಶುದ್ಧಿ, ಇದೇಬಹಿರಂಗ ಶುದ್ಧಿ! ಎನ್ನುವ ಮೂಲಭೂತ ಕರ್ತವ್ಯಗಳ ಪಾಲನೆ, ಸ್ವಯಂ ನಿಷೇಧ ಹೇರಿಕೊಳ್ಳುವ ಹಾಗು ಪ್ರತಿಜ್ಞೆಗಳ ಅನುಕರಣೆಗಳಂತಹ ನೈತಿಕ ಅಂಶಗಳನ್ನು ವಚನಗಳಲ್ಲಿ ಸರಳವಾಗಿ ಹೇಳಲಾಗಿದೆ. ಹಾಗು ವ್ಯಕ್ತಿ ತನ್ನಲ್ಲಿ ಆತ್ಮ ಆತ್ಮಸ್ಥೈರ್ಯ ಹೆಚ್ಚಿಸಿಕೊಳ್ಳಬಹುದಾದ ಮುಖ್ಯವಾದ ಅಂಶಗಳ ಜೊತೆಗೆ ಸಾಮಾಜಿಕ ಸ್ಥಾನ ಮತ್ತು ಹಕ್ಕುಗಳ ಕುರಿತು ವಚನಗಳಲ್ಲಿ ವಿವೇಚಿಸಲಾಗಿದೆ, ಬಸವಣ್ಣನ ವಚನಗಳು ತಾತ್ವಿಕವಾಗಿ ವಿಶ್ವಮಾನವ ಸಂದೇಶವನ್ನು ಸಾರುತ್ತವೆ.

**ಪರಾಮರ್ಶನ ಗ್ರಂಥಗಳು**

1. ಎಂ.ಎಂ.ಕಲಬುರ್ಗಿ,- ವಚನ ಸಾಹಿತ್ಯ ಮತ್ತು ಜೀವನ ಮೌಲ್ಯಗಳು, ಕನ್ನಡ ನುಡಿ, ಮಾರ್ಗ-1, ಪ್ರಸಾರಂಗ, ಕರ್ನಾಟಕ ವಿಶ್ವವಿದ್ಯಾಲಯ, 1987
2. ತಿಪ್ಪೆರುದ್ರಸ್ವಾಮಿ.ಎಚ್, -ವಚನ ಸಾಹಿತ್ಯ ವೈಚಾರಿಕ ಅಧ್ಯಯನ, ಪ್ರಸಾರಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-1983
3. ಬಸವಣ್ಣನವರ ವಚನ ಸಂಪುಟ, -ನಿರ್ದೇಶನಾಲಯ, ಕನ್ನಡ ಮತ್ತು ಸಂಸ್ಕೃತಿ, ಬೆಂಗಳೂರು.
4. ಬಿ.ವಿ.ವೈಕುಂಟರಾಜ್, -ಸಂಪಾದಕರ ಡೈರಿ, ಸನತ್ ಪ್ರಕಾಶನ 2000
5. ಹಿರೇಮಠ ಸಿ.ಎನ್: ಬಸವ ಮತ್ತು ಮಾನವೀಯತೆ, ಬಸವಜರ್ನಲ್.ಸಂಪುಟ-1, ಬೆಂಗಳೂರು.
6. ಪ್ರಭು ಪ್ರಸಾದ್.ಕೆ.ಬಿ. -ವಚನ ವಿಕಾಸನ, ಶರಣಪಥ, ಸಂಪುಟ-2
7. ಲೋಹಿತ್.ಡಿ.ನಾಯಕರ್,-ಬಸವ ಮತ್ತು ಮಾನವ ಹಕ್ಕುಗಳು, ಬಸವ ಸಮಿತಿ, ಬೆಂಗಳೂರು.

[4] ಬಸವಣ್ಣನವರ ವಚನ ಸಂಪುಟ,ನಿರ್ದೇಶನಾಲಯ, ಕನ್ನಡ ಮತ್ತು ಸಂಸ್ಕೃತಿ, ಬೆಂಗಳೂರು.